ಎರಗಿದಾಗ ರಾವಣ ಬಲವಾಗಿ ಹೊಡೆಯುತ್ತಾನೆ. ರಾಮಾಯಣದಲ್ಲಿ ಜಟಾಯುವಿನ ರೆಕ್ಕೆಗಳನ್ನು ಖಡ್ಗದಿಂದ ತರಿದನೆಂದು ಹೇಳಲಾಗಿದ್ದು ಇಲ್ಲಿ ಕೈಗಳಿಂದ ಬಲವಾಗಿ ಹೊಡೆದು ತುಂಡರಿಸಲಾಯಿತು ಎನ್ನಲಾಗಿದೆ. ಇದು ಒಂದು ಬಗೆಯ ನಿರಾಯುಧ ಹತ್ಯೆ. ತನ್ನ ಎರಡು ರೆಕ್ಕೆಗಳನ್ನು ಮುರಿದುಕೊಂಡ ಜಟಾಯು ಆಕಾಶದಿಂದ ಭೂಮಿಯ ಮೇಲೆ ಬೀಳುತ್ತದೆ. ಆ ದೃಶ್ಯ ಇಂದ್ರನು ವಜ್ರಾಯುಧದಿಂದ ಹೊಡೆದಾಗ ಪರ್ವತಗಳು ಬೀಳುವಂತೆ ಕಾಣುತ್ತದೆ.

ರಾವಣನ ವಶದಲ್ಲಿರುವ ಸೀತೆಯ ಅವಸ್ಥೆಯನ್ನು ಕವಿ ಮನೋವೇದಕವಾಗಿ ಚಿತ್ರಿಸಿದ್ದಾನೆ. ಆಕೆ 'ಸಿಂಗದ ಕೈಗೆ ಬಿಟ್ಟ ಹರಿಣಾಂಗನೆ'. ಅಂದರೆ, ಸಿಂಹ ಹಿಡಿದ ಹೆಣ್ಣು ಜಿಂಕೆ.

ಬಲೆಗೊಳಗಾದ ಸೋಗೆನವಿಲಂತೆ ಭಯಾಕುಳೆ ತನ್ನ ಚಿತ್ತ ದೊ
ಳ್ನೆಲಸಿದ ರಾಮನಂ ಬಯಸಿ ನೋಡಲಪೇಕ್ಷಿಸಿ ಬಾಹ್ಯದರ್ಶನ
ಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ನಸು ಮುಚ್ಚೆವೋಗಿ ತ
ಣ್ಣೆಲರಲೆಪಿಂದೆ ಮುಚ್ಚೆದಿಳಿದಳ್ಮಗುಟ್ದುಂ ಪೊಱಪೊಣ್ಮೆಹಾ ರವಂ

ಸೀತೆ ಬಲೆಗೆ ಸಿಕ್ಕಿದ ಸೊಗೆ ನವಿಲಂತೆ ಭಯದಿಂದ ಕಳವಳಗೊಂಡಿದ್ದಾಳೆ. ತನ್ನ ಮನಸ್ಸಿನಲ್ಲಿ ನೆಲೆಸಿರುವ ರಾಮನನ್ನು ಬಯಸಿ, ಅವನನ್ನು ನೋಡುವ ಹಂಬಲ ಹೆಚ್ಚಿದೆ. ಹೊರ ಪ್ರಪಂಚವನ್ನು ನೋಡಲು ಬೇಸರಿಸಿದಳು ಎನ್ನುವಂತೆ ಕಣ್ಣುಮುಚ್ಚಿ ಮೂರ್ಛೆ ಹೋಗಿ, ತಂಗಾಳಿ ಬೀಸಿ ಎಚ್ಚರಗೊಂಡು ರೋದಿಸಿದ್ದಾಳೆ. ನಾಗಚಂದ್ರನಲ್ಲಿ ಉಪಮೆ, ಉಪಮಾನ, ಸ್ವಭಾವೋಕ್ತಿಗಳಿಗಂತೂ ಕೊರತೆಯಿಲ್ಲ. ಅವು ಭಾವಸಹಜವಾಗಿ ಪ್ರಯೋಗಗೊಂಡಿರುವುದರಿಂದ ಸಹೃದಯನಲ್ಲಿ ಸದಾಕಾಲ ಉಳಿಯುತ್ತವೆ.

ಸಿಂಹನಾದವನ್ನು ಕೇಳಿ ಲಕ್ಷ್ಮಣನ ನೆರವಿಗೆ ಧಾವಿಸಿದ್ದ ರಾಮನಿಗೆ ಅದು ಮಾಯಾವಿಯ ಸಂಚು ಎಂಬ ನಿಜ ಸ್ಥಿತಿ ತಿಳಿದ ಕೂಡಲೇ ಹಿಂತಿರುಗುತ್ತಾನೆ. ಮರಳಿ ಬಂದ ರಾಮನಿಗೆ ಲತಾ ಮಂಟಪದಲ್ಲಿ ತನ್ನ ಪ್ರೀತಿಯ ಮಡದಿ ಕಾಣುವುದಿಲ್ಲ. ಆವೇಗ, ಬೆರಗು, ದುಃಖ, ಮೋಹ ಎಲ್ಲಾ ಒಟ್ಟುಗೂಡಿ ಭಾವಪರವಶತೆಯಿಂದ ಮೂರ್ಛಿತನಾಗುತ್ತಾನೆ; ಎಚ್ಚರಗೊಂಡು ಅಡವಿಯ ತುಂಬಾ ಅಲೆಯುತ್ತಾನೆ; ಸೀತೆ ಕಾಣುವುದಿಲ್ಲ; ಶೋಕದಗ್ಧನಾಗುತ್ತಾನೆ:

ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯನಿಶ್ವಾಸೆಯಂ
ತಳಿರೇ ತಾವರೆಯೇ ಮದಾಳಿಕುಲಮೇ ಕನ್ನೈದಿಲೇ ಮತ್ತ ಕೋ
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗಕುಂ
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ

ಈ ಪದ್ಯದಲ್ಲಿ ರಾಮನ ಕೊರಳುಬ್ಬಿ ಗದ್ಗದಿತ ಶಬ್ದಗಳು ಹೊರಗೆ ಉರುಳಿದಂತೆ ಭಾಸವಾಗುತ್ತದೆ. ಇದು ನಾಗಚಂದ್ರನ ಅಪೂರ್ವ ಶೈಲಿ ಸಾಮರ್ಥ್ಯಕ್ಕೆ ಸಮರ್ಥ ನಿದರ್ಶನ. ಯಾವ ಅಲಂಕಾರದ ಗೋಜಲು ಇಲ್ಲದ, ಉತ್ಕಟ ಭಾವಾಭಿವ್ಯಕ್ತಿ ಎನಿಸುತ್ತದೆ. ಮೇಲು ನೋಟಕ್ಕೆ ಸಾಂಪ್ರದಾಯಕ ವರ್ಣನೆಯಂತೆ ಕಂಡರೂ ಶಬ್ದಗುಚ್ಛದಲ್ಲಿ ಅರ್ಥಭಾವ ಮಡುಗಟ್ಟಿದೆ. ಪ್ರಕೃತಿಯ ಜೀವ ಸಂಕುಲವೆ ತನ್ನ ದುಃಖಕ್ಕೆ ಮಿಡಿಯುತ್ತಿರಬಹುದೆಂದು ಭಾವಿಸಿ ರಾಮ ಹೀಗೆ ನುಡಿಯುತ್ತಾನೆ: ಎಲೇ, ಚಿಗುರೇ, ತಾವರೆಯೇ, ಮದಿಸಿದ ದುಂಬಿ ಸಮೂಹವೇ, ಕನ್ನೈದಿಲೆಯೇ, ಅಮಲೇರಿದ ಕೋಗಿಲೆಯೇ–

